# ಒಂದನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.

**CC No.:665/2011**
**C.W.: 1**
**P.W.: 3**

ಸಾಕ್ಷಿದಾರರ ಹೆಸರು : ಮಂಜುಳ
ತಂದೆಯ ಹೆಸರು : ರವಿಕುಮಾರ್
ವಯಸ್ಸು : **35** ವರ್ಷ
ಉದ್ಯೋಗ : ಗೃಹಿಣಿ
ಸಾಕೀನ : ನಲ್ಲಹಳ್ಳಿ

ಸಾಕ್ಷಿಗೆ ಈ ದಿನ ದಿಃ**02.03.2020** ರಂದು ಪ್ರಮಾಣ ವಚನ ಬೋಧಿಸಲಾಯಿತು.

ನನಗೆ ಆರೋಪಿ ಗೊತ್ತು. ಅವರು ನನ್ನ ಗಂಡ. ನನ್ನ ಮತ್ತು ಆರೋಪಿಯ **24** ವರ್ಷಗಳ ಹಿಂದೆ ಆಗಿರುತ್ತದೆ. ಮದುವೆಯನ್ನು ನನ್ನ ತಂದೆ ಮಾಡಿಕೊಟ್ಟಿರುತ್ತಾರೆ. ಮದುವೆಯಲ್ಲಿ ಆರೋಪಿಗೆ **30** ಗ್ರಾಂ ಚಿನ್ನ, ನನಗೆ **100** ಗ್ರಾಂ ಚಿನ್ನ ಮತ್ತು **20** ಸಾವಿರವನ್ನು ಆರೋಪಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ನಮ್ಮ ಮದುವೆಯನ್ನು ಗಂಡನ ಮನೆಯಲ್ಲಿ ಮಾಡಿರುತ್ತಾರೆ. ಮದುವೆಯಾದ ನಂತರ ನಾನು ಆರೋಪಿಯ ಮನೆಯಲ್ಲಿ ಇದ್ದೆನು. ಮದುವೆಯಾಗಿ **2-3** ವರ್ಷ ಚೆನ್ನಾಗಿ ಇದ್ದೇವು. ನಂತರ ನನಗೆ ಆರೋಪಿಯು ಹಿಂಸೆ ಕೊಡುತ್ತಿದ್ದರು. ವರದಕ್ಷಿಣೆ ಹಣವನ್ನು ತರುವಂತೆ ಆರೋಪಿಯು ನನಗೆ ಹಿಂಸೆ ಮಾಡುತ್ತಿದ್ದರು. ನಾನು ಸದರಿ ವಿಚಾರವನ್ನು ನನ್ನ ತಂದೆಗೆ ತಿಳಿಸಿದ್ದು, ನನ್ನ ತಂದ ನನ್ನ ಕೈಯಿಂದ ಆಗುವುದಿಲ್ಲ ಅನುಸರಿಸಿಕೊಂಡು ಹೋಗು ಎಂದು ಹೇಳಿರುತ್ತಾರೆ. ನಂತರ ಪುನಃ ನಾನು ಗಂಡನ ಮನೆಗೆ ಹೋಗಿದ್ದು, ಮತ್ತೆ ಪುನಃ ವರದಕ್ಷಿಣೆ ವಿಚಾರವಾಗಿ ನನಗೆ ಹಿಂಸೆಯನ್ನು ಕೊಡಲು ಆರಂಭಿಸಿದರು. ಪುನಃ ಬಂದು ನನ್ನ ತಂದೆಗೆ ವಿಚಾರವನ್ನು ತಿಳಿಸಿರುತ್ತೇನೆ. ನನ್ನ ತಂದೆ ಅದಕ್ಕೆ ಏನು ಮಾತನ್ನಾಡಲಿಲ್ಲ ಆಗಾಗಿ ನಾನು ಆರೋಪಿಯ ವಿರುದ್ದ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ದೂರಾಗಿದ್ದು ಅದನ್ನು ನಿಪಿ**-3** ಎಂದು ಸಾಕ್ಷಿಯ ಸಹಿಯನ್ನು ನಿಪಿ**-3** ಎ ಎಂದು ಗುರುತಿಸಲಾಯಿತು. ನಿ.ಪಿ. **1** ನ್ನು ನೀಡಿದ ನಂತರ ಆರೋಪಿಯ ಮನೆಗೆ ಹೋಗಿ ಪಂಚನಾಮೆಯನ್ನು ಮಾಡಿರುತ್ತಾರೆ. ಪೋಲೀಸರು ಮನೆ ಮತ್ತು ತೋಟವನ್ನು ನೋಡಿರುತ್ತಾರೆ. ಪೋಲೀಸರಿಗೆ ಸ್ಥಳವನ್ನು ತೋರಿಸಿರುತ್ತೇನೆ. ನಾನು ಅಲ್ಲಿ ಒಂದು ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ-**4** ಎಂದು ಸಾಕ್ಷಿಯ ಸಹಿಯನ್ನು ನಿಪಿ**-4** ಎ ಎಂದು ಗುರುತಿಸಲಾಯಿತು. ನನಗೆ ಒಂದು ಗಂಡು ಮತ್ತು ಹೆಣ್ಣು ಮಕ್ಕಳು ಇದ್ದಾರೆ. ಅವರುಗಳು ನನ್ನ ಜೊತೆಯಲ್ಲಿ ಇರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನ್ಯಾಯದ ಹಿತದೃಷ್ಟಿಯಿಂದ ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಲಯ,
ಕನಕಪುರ